# II ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ

**O.S.No.** 1318/2012

**DW**-2

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 05-12-2023.**

**ಮುಂದುವರೆದ** ಪಾಟೀ ಸವಾಲು ಪ್ರತಿವಾದಿಪರ 1 ರಿಂದ 4 ರವರ ಪರ ಶ್ರೀ.NNM ವಕೀಲರಿಂದ.

ನಿಮ್ಮ ಮನೆಯ ಎಲ್ಲಾ ವ್ಯವಹಾರವನ್ನು ವಾದಿ ನೋಡಿಕೊಳ್ಳುತಿದ್ದರು ಎಂದರೆ ಸರಿ. ಏನೆ ಸ್ವತ್ತುಗಳನ್ನು ಖರೀದಿ ಮಾಡುವುದು ಇದ್ದರು ವಾದಿಯ ಹೆಸರಿನಲ್ಲಿ ಖರೀದಿ ಮಾಡುತಿದ್ದರು ಎಂದರೆ ಸರಿ. ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಹಳಷ್ಟು ಸ್ವತ್ತು ಹೋಗಿರುತ್ತದೆ ಎಂದರೆ ಸರಿ. ನಿಮಗೆ ಸೇರಿದ ಪಿತ್ರಾರ್ಜಿತ ಸ್ವತ್ತು ಅಂದರೆ ಪ್ಲಾಟ್ KLE ಕಡೆ ಇತ್ತು ಅದನ್ನು ಮಾರಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮಾರಿ ಬಂದ 17 ಲಕ್ಷ ರೂಗಳಲ್ಲಿ ವಾದಿ ಅಜಮ ನಗರದಲ್ಲಿ ಅವನ ಹೆಸರಿನಲ್ಲಿ ಪ್ಲಾಟನ್ನು ಖರೀದಿ ಮಾರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮಗೆ ಸದರಿ ವಿಷಯ ಗೊತ್ತಿದ್ದರು ಸಹ ಆನಂದರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೀರಿ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳು ಎಲ್ಲಿ ಎಲ್ಲಿ ಇರುತ್ತವೆ ಎಂದು ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಬಹಳ ಇರುವುದರಿಂದ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ವಾದಿ ಮತ್ತು ಅಣ್ಣಪ್ಪ, ಸಿದ್ದಪ್ಪ ಹಾಗೂ ಇತರರು 18 ವರ್ಷಗಳಿಂದ ಬೇರೆ ಬೇರೆ ಇರುತ್ತಾರೆ ಎಂದರೆ ಸಾಕ್ಷಿ ಹೌದು ಇರುವುದಷ್ಟೆ ಬೇರೆ ಆಸ್ತಿಗಳನ್ನೆಲ್ಲಾ ಕೂಡೆ ಮಾಡುತ್ತಾರೆ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ತಂದೆಯ ನೌಕರಿ ಸಿಕ್ಕಿರುತ್ತದೆ ಎಂದರೆ ಸರಿ. ನೌಕರಿ ಬಂದಾಗಿನಿಂದ 1 ನೇ ಪ್ರತಿವಾದಿ ಕಾಕತಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ.1 ನ್ನು ತೋರಿಸುತಿದ್ದು ಸದರಿ ಸಹಿ ನಿಮ್ಮ ಗಂಡನದ್ದ ಎಂದರೆ ಸಾಕ್ಷಿ ನೋಡಿ ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಸಹಿಯನ್ನು ನಿಡಿ.1 ಎ ಎಂದು ಗುರುತಿಸಲಾಯಿತು. ನಮ್ಮ ಪಿತ್ರಾರ್ಜಿತ ಆಸ್ತಿಗಳ ಚಕ್ಕ ಬಂದಿ ನನಗೆ ಹೇಳಲಾಗುವುದಿಲ್ಲ. ನಿಮ್ಮ ತಾಯಿ ಈಗ 1 ನೇ ಪ್ರತಿವಾದಿಯ ಬಳಿ ಇರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಲ್ಲರ ಬಳಿ ಇರುತ್ತಾರೆ ಎನ್ನುತ್ತಾರೆ. ನಿಮ್ಮ ಗಂಡ ನಿಮ್ಮ ತಾಯಿ ಹಾಗೂ 1 ನೇ ಪ್ರತಿವಾದಿ ವಿರುದ್ಧ ದಾವೆಯನ್ನು ಹೂಡಿದ್ದರು ಅದರ ಬಗ್ಗೆ ತಿಳಿದಿದೆಯ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಗಂಡ 1 ನೇ ಪ್ರತಿವಾದಿ ವಿರುದ್ದ 101/ಅ ಮತ್ತುಬ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿರುವುದು ನಿಮಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿ. ಸಿಂಧೋಳಿಯ ಮನೆ

ನಂ.33 ರಲ್ಲಿ ನಿಮ್ಮ ಸಹೋದರಿ ಇರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ಆಕೆಯ ಸ್ವಂತ ಖರೀದಿ ಮಾಡಿದ ಸ್ವತ್ತು ಎಂದರೆ ಸರಿ. ಸಾಂಬ್ರಾದಲ್ಲಿರುವ ನಿಪಿ. 11 ರ ಸ್ವತ್ತಿನ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಸ್ವತ್ತು ಪಿತ್ರಾರ್ಜಿ ಆಸ್ತಿ ಅಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸ್ವತ್ತನ್ನು ಸಾಲವಾಗಿರುತ್ತದೆ ಎಂದು ನಿಮ್ಮ ತಮ್ಮ ಸಿದ್ದಪ್ಪರವರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಪಿ. 1 and 2 ರ ಸ್ವತ್ತುಗಳು ಈಗ 10 ರಿಂದ 12 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ.1 ಮತ್ತು 2 ರ ಸ್ವತ್ತನ್ನು 1 ನೇ ಪ್ರತಿವಾದಿ ಉಳುಮೆ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೂಡೆ ಮಾಡುತ್ತಾರೆ ಎನ್ನುತ್ತಾರೆ. ನೀವು ಮತ್ತು 1 ನೇ ಪ್ರತಿವಾದಿ ಮಾತನಾಡುವುದಿಲ್ಲ ಎಂದರೆ ಸಾಕ್ಷಿ ಇಲ್ಲ ಮಾತನಾಡುತ್ತೇವೆ ಎನ್ನುತ್ತಾರೆ. RS No.140/10 ಮತ್ತು 140/10 ಎ ಮತ್ತು ಬೆಗೆ ವಾದಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ ಸಂಬಂಧ ಇರುತ್ತದೆ ಎನ್ನುತ್ತಾರೆ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ಸ್ವಂತ ಗಳಿಸಿದ ಹಣದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸದರಿ ಸ್ವಂತ ಆಸ್ತಿಯಲ್ಲಿ ವಾದಿಗೆ ಪಾಲು ಕೊಡಿಸಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೀರಿ ಎಂದರೆ ಸರಿಯಲ್ಲ. ನೀವು ನ್ಯಾಯಾಲಯದಲ್ಲಿ ವಾದಿಯ ಸೂಚನೆಯಂತೆ ಸಾಕ್ಷಿ ನುಡಿಯುದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ/–**

**2 ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ ಎಮ್ ಎಫ್ ಸಿ, ಬೆಳಗಾವಿ**